# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : | 752 |
| ಸದಸ್ಯರ ಹೆಸರು | : | ಡಾ: ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 17.09.2021 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | "ಮುಖ್ಯ ಮಂತ್ರಿ ರೈತ ಮಕ್ಕಳ ವಿದ್ಯಾ ನಿಧಿ" ಯೋಜನೆ ರಾಜ್ಯದಲ್ಲಿ ಅಸ್ತಿತ್ವದಲ್ಲಿದೆಯೇ: ಇದ್ದಲ್ಲಿ, ಇದರ ರೂಪುರೇಷಗಳೇನು: | "ಮುಖ್ಯಮಂತ್ರಿ ರೈತ ವಿದ್ಯಾ ನಿಧಿ" ಕಾರ್ಯಕ್ರಮವನ್ನು ದಿನಾಂಕ 05.09.2021ರಂದು ಲೋಕಾರ್ಪಣೆಗೊಳಿಸಲಾಯಿತು.<br>ರಾಜ್ಯದ ರೈತರ ಮಕ್ಕಳ ಹೆಚ್ಚಿನ ಹಾಗೂ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸುವ ಉದ್ದೇಶದ ರೂಪುರೇಷೆಗಳೊಂದಿಗೆ ಸದರಿ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ . |
| ಆ. | ಈ ಯೋಜನೆಗೆ ಫಲಾನುಭವಿಗಳ ಆಯ್ಕೆಯ ಮಾನದಂಡಗಳೇನು: | ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ ಅಥವಾ ಹತ್ತನೇ ತರಗತಿಯನ್ನು ಪೂರ್ಣಗೊಳಿಸಿದ ನಂತರ ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ /ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್ ಗಳವರೆಗೆ ಪ್ರವೇಶ ಪಡೆದಿರುವ ಕರ್ನಾಟಕ ರಾಜ್ಯದಲ್ಲಿ ರೈತರ ಗುರುತಿನ ಸಂಖ್ಯೆ(FID) ಹೊಂದಿದ ಹಾಗೂ ಇತರೇ ಯಾವುದೇ ಮೂಲಗಳಿಂದ ಶಿಷ್ಯವೇತನ ಪಡೆಯದೇ ಇರುವ ರೈತರ ಮಕ್ಕಳ ಬ್ಯಾಂಕ್ ಗಳ ಖಾತೆಗೆ ವಾರ್ಷಿಕ ಶಿಷ್ಯವೇತನ (Scholarship) ಮೊತ್ತವನ್ನು ನೇರ ನಗದು ವರ್ಗಾವಣೆ (Direct Benefit transfer-DBT) ಮುಖಾಂತರ ಪಾವತಿಸಲು ಉದ್ದೇಶಿಸಲಾಗಿದೆ. |

| | | |
|---|---|---|
| ಇ. | ಈ ಯೋಜನೆಯಿಂದ ರಾಜ್ಯದಲ್ಲಿ ಎಷ್ಟು ರೈತ ಮಕ್ಕಳಿಗೆ ಅನುಕೂಲವಾಗಲಿದೆ ಹಾಗೂ ಈ ಯೋಜನೆಗೆ ವಾರ್ಷಿಕವಾಗಿ ಎಷ್ಟು ಹಣವನ್ನು ವಿನಿಯೋಗಿಸಲಾಗುವುದು? (ಜಿಲ್ಲಾವಾರು ವಿವರಗಳನ್ನು ನೀಡುವುದು) | ಈ ಕಾರ್ಯಕ್ರಮವನ್ನು 2021-22ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಸುಮಾರು 10 ಲಕ್ಷ ರೈತರ ಮಕ್ಕಳು ಇದರ ಪ್ರಯೋಜನ ಪಡೆಯಬಹುದಾಗಿ ಅಂದಾಜಿಸಲಾಗಿದೆ.<br>ಈ ಕಾರ್ಯಕ್ರಮದ ಅನುಷ್ಠಾನಕ್ಕೆ ರೂ.1000.00 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದೆ. ಸದರಿ ಕಾರ್ಯಕ್ರಮವು ಅನುಷ್ಠಾನದ ಹಂತದಲ್ಲಿದ್ದು, ಇದುವರೆವಿಗೂ ಶಿಷ್ಯವೇತನ ವರ್ಗಾವಣೆಯಾದ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |

ಸಂಖ್ಯೆ: AGRI-AML/176/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

# ಅನುಬಂಧ

| ಕ್ರ. ಸಂ. | ಜಿಲ್ಲೆ | ಶಿಷ್ಯವೇತನ ವರ್ಗಾವಣೆಯಾದ ವಿದ್ಯಾರ್ಥಿಗಳ ಸಂಖ್ಯೆ | ಶಿಷ್ಯವೇತನ ವರ್ಗಾವಣೆಯಾದ ಮೊತ್ತ (ರೂ.) |
|---|---|---|---|
| 1 | ಬಾಗಲಕೋಟೆ | 3 | 8000 |
| 2 | ಬೆಂಗಳೂರು (ಗ್ರಾ) & (ನ) | 9 | 25500 |
| 3 | ಬೆಳಗಾವಿ | 5 | 14000 |
| 4 | ಬಳ್ಳಾರಿ | 6 | 16000 |
| 5 | ಬೀದರ್ | 9 | 25500 |
| 6 | ವಿಜಯಪುರ | 6 | 15500 |
| 7 | ಚಾಮರಾಜನಗರ | 4 | 10000 |
| 8 | ಚಿಕ್ಕಬಳ್ಳಾಪುರ | 9 | 24500 |
| 9 | ಚಿಕ್ಕಮಗಳೂರು | 1 | 2500 |
| 10 | ಚಿತ್ರದುರ್ಗ | 5 | 14000 |
| 11 | ದಕ್ಷಿಣ ಕನ್ನಡ | 2 | 5000 |
| 12 | ದಾವಣಗೆರೆ | 3 | 8500 |
| 13 | ಧಾರವಾಡ | 4 | 12000 |
| 14 | ಗದಗ | 5 | 12500 |
| 15 | ಕಲಬುರ್ಗಿ | 5 | 13500 |
| 16 | ಹಾಸನ | 4 | 11000 |
| 17 | ಹಾವೇರಿ | 5 | 14000 |
| 18 | ಕೊಡಗು | 6 | 15500 |
| 19 | ಕೋಲಾರ | 4 | 11000 |
| 20 | ಕೊಪ್ಪಳ | 8 | 22500 |
| 21 | ಮಂಡ್ಯ | 10 | 26500 |
| 22 | ಮೈಸೂರು | 6 | 16000 |
| 23 | ರಾಯಚೂರು | 4 | 11000 |
| 24 | ರಾಮನಗರ | 1 | 2500 |
| 25 | ಶಿವಮೊಗ್ಗ | 10 | 28500 |
| 26 | ತುಮಕೂರು | 4 | 12000 |
| 27 | ಉಡುಪಿ | 5 | 12500 |
| 28 | ಉತ್ತರ ಕನ್ನಡ | 5 | 13000 |
| 29 | ಯಾದಗಿರಿ | 3 | 8000 |
| **ಒಟ್ಟು** | | **151** | **411000** |